OS : 78/2021
P.W-1

<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 07.09.2023 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ . ನಾನು ಎ ಪಿ ಎಂ ಸಿ ಯಲ್ಲಿ ದಲ್ಲಾಳಿಯಾಗಿ ಕೆಲಸ ನಿರ್ವಹಿಸುತ್ತಿದ್ದನು ತೋರಿಸಲು ದಾಖಲೆ ಸಲ್ಲಿಸಿಲ್ಲ, ಸಾಕ್ಷಿ ಅದನ್ನು ಸಲ್ಲಿಸುತ್ತೇನೆ ಎನ್ನುತ್ತಾರೆ. ಪ್ರಮಾಣ ಪತ್ರದಲ್ಲಿರುವ ವಿಚಾರ ಸರಿಯಾಗಿದೆ. ಸೂಕ್ತ ದಾಖಲೆಗಳನ್ನು ಸಲ್ಲಿಸಿದ್ದೇನೆ. ನಿಪಿ 1,2 ಮೂಲ ದಾಖಲೆಗಳು ಅಲ್ಲ ಎಂದರೆ ಸಾಕ್ಷಿ ಮೂಲ ದಾಖಲೆಗಳು ಹಾಜರು ಪಡಿಸಿ ಸದರಿ ದಾಖಲೆಗಳನ್ನು ಗುರುತಿಸಲಾಗಿದೆ ಎನ್ನುತ್ತಾರೆ. ಬಡ್ಡಿ ವಿವರಗಳನ್ನು ನಿಪಿ 1,2 ರಲ್ಲಿ ನೀಡಿಲ್ಲ ಎಂದರೆ ಸರಿ. ಲೆಕ್ಕ ಪರಿಶೋಧಕರ ವರದಿಯನ್ನು , ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಸಲ್ಲಿಸುತ್ತೇನೆ ಎನ್ನುತ್ತಾರೆ. ರೂ.1,80,000/- ಗಳನ್ನು ಚೆಕ್ಕಿನ ಮೂಲಕ ನೀಡಿರುವ ಸಂಬಂದ ದಾಖಲೆ ಸಲ್ಲಿಸಿದ್ದೇನೆ. ನನ್ನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸುತ್ತೇನೆ. ರೂ.1,50,000/- ಗಳನ್ನು ಚೆಕ್ಕಿನ ಮೂಲ ಪಾವತಿಸಿರುವ ವಿವರಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ರೂ.20,000/- ನಗದಿನ ರೂಪದಲ್ಲಿ ನೀಡಿದ್ದೀರಿ ಎಂದರೆ ಸರಿ. ನಿಪಿ 2 ರ ಕೊನೆಯ ಪುಟದಲ್ಲಿ ಪ್ರತಿವಾದಿಯ ಸಹೋದರ ಸಹಿ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯ ಸಹೋದರ ನಿಪಿ 2 ಕ್ಕೆ ಸಹಿ ಮಾಡಿರುವ ವಿಚಾರವನ್ನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ . ನೀವು ಹೇಳುವ ಹಾಗೆ ಪ್ರತಿವಾದಿ ನಿಮ್ಮಿಂದ ಯಾವುದೇ ಹಣವನ್ನು ಪಡೆದುಕೊಂಡಿಲ್ಲ , ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತಿದ್ದೀರಿ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ನಮೂದಿಸಿರುವ ಜಮಾ ಖರ್ಚಿನ ವಿವರಗಳನ್ನು ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ನಿಪಿ 2 ರಲ್ಲಿರುವ ಕೆಲವು ಎಂಟ್ರಿಗಳು ಪ್ರತಿವಾದಿಗಳಿಗೆ ಸಂಬಂದಿಸಿಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

ಓ,ಹೇ,ಕೇ,ಸರಿ ಇದೆ,

ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ
ಕೂಡ್ಲಿಗಿ.